- -                                    ಓ ಎಸ್ ನಂ.85/2023

ಡಿ . ಡಬ್ಲ್ಯೂ 2

ದಿನಾಂಕ : **17-06-2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನಮ್ಮ ಊರು ಬೊಮ್ಮನರಸನಹಳ್ಳಿ . ವಾದಿಯು ಈ ದಾವೆಯನ್ನು ಸರ್ವೆ ನಂ. 52 ಕ್ಕೆ ಸಂಬಂಧಿಸಿ ಸಲ್ಲಿಸಿದ್ದಾರೆ . ಸರ್ವೆ ನಂ. 52 ರ ಸ್ವತ್ತು ಬೊಮ್ಮನರಸನಹಳ್ಳಿ ಹಳ್ಳಿಯ ಯಾವ ಭಾಗದಲ್ಲಿದೆ ಎಂದರೆ ಸಾಕ್ಷಿಯು ಕದರೇದೇವರ ಕೆರೆಹಟ್ಟಿಯ ಮುಂಭಾಗದಲ್ಲಿದೆ ಎಂದು ತಿಳಿಸಿದ್ದಾರೆ . ಸರ್ವೆ ನಂ. 52 ರ ಸಮೀಪದಲ್ಲಿ ನನಗೆ ಸೇರಿದ ಸರ್ವೆ ನಂ. 59 ರ ಸ್ವತ್ತು ಇರುತ್ತದೆ . ಯಾವ ಕಾರಣಕ್ಕೆ ನ್ಯಾಯಾಲಯಕ್ಕೆ ಬಂದಿದ್ದೀರಿ ಎಂದರೆ ಸಾಕ್ಷಿಯು ನೀವು ನಮ್ಮ ಪಕ್ಕದ ಜಮೀನಿನಲ್ಲಿದ್ದೀರಿ ಆದುದರಿಂದ ನ್ಯಾಯಾಲಯಕ್ಕೆ ಬಂದು ನಮ್ಮ ಸ್ವತ್ತಿನ ಬಗ್ಗೆ ಸಾಕ್ಷಿ ನುಡಿಯರಿ ಎಂದು 1 ನೇ ಪ್ರತಿವಾದಿ ಕೇಳಿದ್ದರು , ಆದುದರಿಂದ ಬಂದಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ . 1 ನೇ ಪ್ರತಿವಾದಿಯ ಸ್ವತ್ತಿನ ಸಮೀಪದಲ್ಲಿ ನನಗೆ ಸೇರಿದ ಸ್ವತ್ತು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ನನ್ನ ಸ್ವತ್ತಿನ ದಾಖಲೆ ಹಾಜರುಪಡಿಸಿಲ್ಲ . ವಾದಿಯು ಎಷ್ಟು ವರ್ಷಗಳಿಂದ ಸ್ವತ್ತಿನ ಅನುಭವದಲ್ಲಿದ್ದಾರೆ ಎಂದರೆ ಅವರು ಅನುಭವದಲ್ಲಿರುವುದನ್ನು ನಾನು ನೋಡಿಲ್ಲ ಎಂದು ತಿಳಿಸಿದ್ದಾರೆ .

1 ನೇ ಪ್ರತಿವಾದಿಯ ಅನುಭವದಲ್ಲಿರುವ ಸ್ವತ್ತಿನ ಪೂರ್ವಕ್ಕೆ ಕೆರೆಕೋಡಿ ಇರುತ್ತದೆ ಎಂದರೆ ಸರಿ . ಪಶ್ಚಿಮ ದಿಕ್ಕಿಗೆ ಅಂಡನಹಳ್ಳಿ ಗೋವಿಂದಪ್ಪ ಸ್ವತ್ತು ಇದೆ ಎಂದರೆ ಸರಿಯಲ್ಲ , ದೇವರಾಜಯ್ಯ ರವರ ಸ್ವತ್ತು ಇರುತ್ತದೆ . ಸದರಿ ಸ್ವತ್ತು 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ . ಸದರಿ ಸ್ವತ್ತು 1 ನೇ ಪ್ರತಿವಾದಿಗೆ ಅವರ ತಂದೆ ಕಡೆಯಿಂದ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಸ್ವಾಧೀನ ಸ್ವತ್ತಿನ ವಿಸ್ತೀರ್ಣ ಗೊತ್ತಿಲ್ಲ . ನಾನು ಪ್ರತಿನಿತ್ಯವೂ 1 ನೇ ಪ್ರತಿವಾದಿಯ ಸ್ವತ್ತಿನಲ್ಲಿ ಕೆಲಸ ಮಾಡಲು ಹೋಗುತ್ತೇನೆ ಆದುದರಿಂದ ಅವರ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ . ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ ಎಂದರೆ ಸರಿ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .